ಕರ್ನಾಟಕ ಸರ್ಕಾರ

# ಪಿರಿಯಾಪಟ್ಟಣ
# ತಾಲೂಕು ಗ್ಯಾಸೆಟಿಯರ್


**ಕರ್ನಾಟಕ ಗ್ಯಾಸೆಟಿಯರ್ ಇಲಾಖೆ**

೮ನೇ ಮಹಡಿ, ಕಾವೇರಿ ಭವನ (ಜಲಮಂಡಳಿ)

ಬೆಂಗಳೂರು – ೫೬೦ ೦೦೯

ಕರ್ನಾಟಕ ಸರ್ಕಾರ

# ಪಿರಿಯಾಪಟ್ಟಣ
# ತಾಲೂಕು ಗ್ಯಾಸೆಟಿಯರ್

*ಲೇಖಕರು*
ಡಾ| ಪಿ.ಕೆ. ರಾಜಶೇಖರ್

*ಮುಖ್ಯ ಸಂಪಾದಕರು*
ಎಸ್. ಅನೀಸ್ ಸಿರಾಜ್, ಕ.ಆ.ಸೇ.

**ಕರ್ನಾಟಕ ಸರ್ಕಾರದ ಪ್ರಕಟಣೆ**

**ಪಿರಿಯಾಪಟ್ಟಣ**
**ತಾಲೂಕು ಗ್ಯಾಸೆಟಿಯರ್**
**ಲೇಖಕರು : ಡಾ| ಪಿ.ಕೆ. ರಾಜಶೇಖರ್**

© ಕರ್ನಾಟಕ ಸರ್ಕಾರ
ಮುಖ್ಯ ಸಂಪಾದಕರ ಕಛೇರಿ
೮ನೇ ಮಹಡಿ
ಕಾವೇರಿ ಭವನ (ಜಲಮಂಡಳಿ)
ಬೆಂಗಳೂರು–೫೬೦ ೦೦೯
✆ +೯೧–೮೦–೨೨೨೧ ೩೪೭೪
ಫ್ಯಾಕ್ಸ್: +೯೧–೮೦–೨೨೨೪ ೩೨೯೩

**Published by Government of Karnataka**

**PERIYAPATTANA**
**TALUK GAZETTEER**

by Dr. P.K. Rajashekhar

© Government of Karnataka
Office of the Chief Editor
8th Floor
Cauvery Bhavan (BWSSB)
Bangalore - 560 009
✆ +91-80-2221 3474
Fax: +91-80-2224 3293

ವರ್ಷ : ೨೦೧೦

ಬೆಲೆ :

**ಪ್ರತಿಗಳು ದೊರೆಯುವ ಸ್ಥಳಗಳು :**

ಮುಖ್ಯ ಸಂಪಾದಕರ ಕಛೇರಿ
೮ನೇ ಮಹಡಿ, ಕಾವೇರಿ ಭವನ (ಜಲಮಂಡಳಿ ಕಟ್ಟಡ)
ಬೆಂಗಳೂರು–೫೬೦ ೦೦೯
ಇಮೇಲ್: kargaz@nic.in
ವೆಬ್‌ಸೈಟ್: www.kar.nic.in/gazetteer

ಸರ್ಕಾರಿ ಮುದ್ರಣ ಮತ್ತು ಲೇಖನ ಸಾಮಗ್ರಿ
ಕೇಂದ್ರ ಪುಸ್ತಕ ಮಳಿಗೆ, ಬಹುಮಹಡಿಕಟ್ಟಡ
ಡಾ. ಅಂಬೇಡ್ಕರ್ ವೀದಿ, ಬೆಂಗಳೂರು–೫೬೦ ೦೦೧

ಉಪ ನಿರ್ದೇಶಕರು, ಸರ್ಕಾರಿ ಶಾಖಾ ಮುದ್ರಣಾಲಯ,
ಬೋಗಾದಿ ರಸ್ತೆ, ಸರಸ್ವತಿಪುರಂ, ಮೈಸೂರು

ಉಪ ನಿರ್ದೇಶಕರು, ಸರ್ಕಾರಿ ಶಾಖಾ ಮುದ್ರಣಾಲಯ
ಪಣಜಿ ರಸ್ತೆ, ಧಾರವಾಡ

ಉಪ ನಿರ್ದೇಶಕರು, ಸರ್ಕಾರಿ ಶಾಖಾ ಮುದ್ರಣಾಲಯ, ಗುಲ್ಬರ್ಗಾ

---

**ಪರಿಶ್ರೀ ಮುದ್ರಣಾಲಯ**
# ೯, ೪ನೇ ಅಡ್ಡರಸ್ತೆ, ನಾಗಪ್ಪ ಬಡಾವಣೆ, ಶ್ರೀರಾಮಪುರ,
ಬೆಂಗಳೂರು–೫೬೦ ೦೨೧, ✆ : ೨೩೧೨ ೮೨೮೬, ३೨೦೧ ೬೩೯೮
ವೆಬ್‌ಸೈಟ್: www.parishree.com

# ಮುನ್ನುಡಿ

ಕರ್ನಾಟಕವೂ ಸೇರಿದಂತೆ ಭಾರತಕ್ಕೆ ಶ್ರೀಮಂತ ಗ್ಯಾಸೆಟಿಯರ್ ಪರಂಪರೆಯಿದೆ. ವಿಷಯ ವೈವಿಧ್ಯತೆಯಿಂದಾಗಿ "ಪ್ರಾದೇಶಿಕ ವಿಷಯ ಕೋಶ"ಗಳೆಂದೇ ಖ್ಯಾತಿ ಪಡೆದಿರುವ ಗ್ಯಾಸೆಟಿಯರ್‌ಗಳಿಗೆ ಸಮಾನವಾದ ಸಾಹಿತ್ಯ ಪರಂಪರೆ ಪ್ರಾಚೀನ ಭಾರತೀಯ ಇತಿಹಾಸದಲ್ಲಿ ಕಂಡುಬರುತ್ತವೆ. ಗ್ಯಾಸೆಟಿಯರ್‌ಗಳ ಮಾದರಿಯನ್ನು ಹೋಲುವ ಪ್ರಾಚೀನ ಗ್ರಂಥಗಳೆಂದರೆ ಕೌಟಲ್ಯನ 'ಅರ್ಥಶಾಸ್ತ್ರ', ವರಹಾಮಿಹಿರನ 'ಬೃಹದ್ ಸಂಹಿತಾ' ಹಾಗೂ ಅಕ್ಬರನ ಆಡಳಿತಾವಧಿಯಲ್ಲಿ ಅಬ್ದುಲ್ ಫಸಲ್ ರಚಿಸಿದ 'ಐನ್–ಇ–ಅಕ್ಬರಿ' ಮೊದಲಾದ ಕೃತಿಗಳು ದೇಶಿಯರು ರೂಢಿಗೊಳಿಸಿದ್ದ ಗ್ಯಾಸೆಟಿಯರಿನ ಸಾಂಪ್ರದಾಯಿಕ ಅಸ್ತಿತ್ವದ ಬಗ್ಗೆ ಉತ್ತಮ ನಿದರ್ಶನಗಳಾಗಿವೆ. ಆದರೆ ಆಧುನಿಕ ಪರಿಕಲ್ಪನೆಯಿಂದೊಡಗೂಡಿದ 'ಗ್ಯಾಸೆಟಿಯರ್'ಗಳನ್ನು ಬ್ರಿಟಿಷರು ತಮ್ಮ ಆಡಳಿತದ ಅನುಕೂಲಕ್ಕಾಗಿ ಸಂಪಾದಿಸಿ ಹೊರತರಲು ಪ್ರಥಮ ಬಾರಿಗೆ ಕ್ರಮಕೈಗೊಂಡಿದ್ದು, ಈ ಸಂಪುಟಗಳ ರಚನೆ ಮತ್ತು ಪ್ರಕಟಣೆಗೆ ಪ್ರಧಾನ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ೧೯ನೇ ಶತಮಾನದ ಮಧ್ಯಭಾಗದಲ್ಲಿ ಜಿಲ್ಲಾ ಗ್ಯಾಸೆಟಿಯರುಗಳ ಸಂಪಾದನಾ ಹಾಗೂ ಪ್ರಕಟಣಾ ಕಾರ್ಯವನ್ನು ಸಂಸ್ಥಾನದಲ್ಲಿ ಬ್ರಿಟಿಷ್ ಸರ್ಕಾರದ ನಿರ್ದೇಶನದಂತೆ ೧೮೬೭ರಲ್ಲಿ ಮೈಸೂರು ಜಿಲ್ಲಾ ಗ್ಯಾಸೆಟಿಯರ್ ಸಂಪುಟವನ್ನು ಎಚ್.ವೆಲ್ಲೆಸ್ಲಿಯವರು ಸಂಪಾದಿಸಿ ಪ್ರಕಟಿಸಿದ್ದು, ಪ್ರಪ್ರಥಮ ಪ್ರಯತ್ನವಾಗಿತ್ತು. ನಂತರ ಕೋಲಾರ ಜಿಲ್ಲಾ ಸಂಪುಟವನ್ನು ಬಿ. ಕೃಷ್ಣಯ್ಯಂಗಾರ್ ಅವರು ೧೮೬೯ರಲ್ಲಿ ಸಂಪಾದಿಸಿ ಪ್ರಕಟಿಸಿದ್ದರು.

ಈ ಪರಂಪರೆಯನ್ನು ಮುಂದುವರೆಸಿದ ಸರ್ಕಾರ, ಮೈಸೂರು ಸಂಸ್ಥಾನದ ಬಗ್ಗೆ ೧೮೭೬ರಲ್ಲಿ ಮೊದಲ ಬಾರಿಗೆ ಬಿ.ಎಲ್. ರೈಸ್‌ರ ಸಂಪಾದಕತ್ವದಲ್ಲಿ '*Mysore and Coorg Gazetteer*' ಗ್ರಂಥವನ್ನು ಎರಡು ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿತು. ನಂತರ ೧೮೭೮ರಲ್ಲಿ ಮೈಸೂರು ಮತ್ತು ಕೂರ್ಗ್ ಮಾಲಿಕೆಯಲ್ಲೇ ಕೂರ್ಗ್(ಕೊಡಗು) ಸಂಪುಟವನ್ನೂ ಅವರೇ ಸಂಪಾದಿಸಿ ಪ್ರಕಟಿಸಿದರು.

ಮುಂದೆ ೧೮೯೭ರಲ್ಲಿ ಬಿ.ಎಲ್. ರೈಸ್ ಹಿಂದೆ ತಾವೇ ಸಂಪಾದಿಸಿ ಪ್ರಕಟಿಸಿದ್ದ '*Mysore and Coorg Gazetteer*' ನ ಮೊದಲೆರಡು ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನಷ್ಟೇ ಪುನಃ ಸಂಪಾದಿಸಿ ಪ್ರಕಟಿಸಿದರು. ಆನಂತರ ೧೯೨೭-೩೦ರ ನಡುವೆ ರಾವ್‌ಬಹದ್ದೂರ್ ಸಿ. ಹಯವದನರಾವ್ 'ಮೈಸೂರು ಗ್ಯಾಸೆಟಿಯರ್' ಅನ್ನು ಐದು ಸಂಪುಟ (ಎಂಟು ಭಾಗ)ಗಳಲ್ಲಿ ಸಂಪಾದಿಸಿ ಪ್ರಕಟಿಸಿದ್ದೂ, ಒಂದು ಮೈಲಿಗಲ್ಲೇ ಆಯಿತು. ಏತನ್ಮಧ್ಯೆ ಸಂಸ್ಥಾನದ ಸರ್ಕಾರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ೧೯೧೪ ರಿಂದ ಜಾರಿಗೊಳಿಸಿದುದರ ಪರಿಣಾಮವಾಗಿ ಜಿಲ್ಲಾ ಕೈಪಿಡಿ(*District Handbook*) ಹಾಗೂ ತಾಲೂಕು ಕೈಪಿಡಿ(*Taluk Handbook*)ಗಳನ್ನು ೧೯೧೫-೧೬ ರಲ್ಲಿ ಆಂಗ್ಲಭಾಷೆಯಲ್ಲಿ ಪ್ರಕಟಿಸಲು ಆರಂಭಿಸಿದ್ದು ಅಷ್ಟೇ ಮಹತ್ವದ್ದಾಗಿತ್ತು.

ಆ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ಹ್ಯಾಂಡ್‌ಬುಕ್ ಅನ್ನು ರಚಿಸಿ ಸಂಪಾದಿಸಿ ೧೯೧೬ರಲ್ಲಿ ಪ್ರಕಟಿಸಿದಾಗ ಸರ್ಕಾರದಲ್ಲಿ ಜಿಲ್ಲಾ ಆರ್ಥಿಕ ಅಧೀಕ್ಷಕರಾಗಿದ್ದ ಎನ್. ಸುಬ್ಬರಾವ್ ಹಾಗೂ ಜಿಲ್ಲಾಧಿಕಾರಿಯಾಗಿದ್ದ ಸಿ.ಎಸ್. ಬಾಲಸುಂದರಮ್ ಐಯ್ಯರ್ ಅವರು ತಮ್ಮ ಮುನ್ನುಡಿಯಲ್ಲಿ "ಇದೊಂದು ಪ್ರಥಮ ಪ್ರಯತ್ನವಾಗಿದ್ದು ಪೂರ್ಣವಾಗಿ ಸಮಗ್ರವಾಗಿದೆ ಎಂದು ಹೇಳಲಾಗುವುದಿಲ್ಲ. ಈಗ ಪ್ರಕಟವಾಗುತ್ತಿರುವ ಜಿಲ್ಲಾ ಗ್ಯಾಸೆಟಿಯರ್‌ಗಳು ಪ್ರತ್ಯೇಕವಾದ ವಿಶಿಷ್ಟ ಯೋಜನೆಯ ಮೇರೆಗೆ ರಚಿತವಾಗುತ್ತಿವೆ. ಆದರೆ, ಈ ಜಿಲ್ಲಾ ಹ್ಯಾಂಡ್‌ಬುಕ್‌ಗಳ ಮೂಲಭೂತ ಉದ್ದೇಶವೆಂದರೆ ವಿವಿಧ ಇಲಾಖಾ ಅಧಿಕಾರಿಗಳಿಗೆ ಆಡಳಿತದ ವಿವಿಧ ಅಂಕಿ-ಅಂಶಗಳನ್ನು ಸಮಗ್ರವಾಗಿ ಒದಗಿಸುವುದೇ ಆಗಿದೆ" ಎಂದು ಅಭಿಪ್ರಾಯಪಡುತ್ತಾರೆ. ಜಿಲ್ಲಾ ಗ್ಯಾಸೆಟಿಯರ್‌ಗಳಲ್ಲಿ ಸರ್ಕಾರದ ವೈವಿಧ್ಯಮಯ ಯೋಜನೆ, ಅಂಕಿ-ಅಂಶ ಹಾಗೂ ಇತರೆ ವಿಚಾರಗಳ ಬಗ್ಗೆ ಜಿಲ್ಲಾಮಟ್ಟದಲ್ಲಿ ವಿವರಗಳು ಸಮಗ್ರವಾಗಿ ದಾಖಲಾಗುತ್ತಿರುವಂತೆ, ತಾಲೂಕು ಮಟ್ಟದಲ್ಲೂ, ಆಡಳಿತ ಘಟಕದ ಬಗ್ಗೆ, ಆಡಳಿತಾತ್ಮಕ ಸಾಧನೆಗಳ, ಅಂಕಿ-ಅಂಶಗಳ ಬಗ್ಗೆ ವೈವಿಧ್ಯಮಯವಾದ ವಿವರಗಳನ್ನು ಸೂಕ್ಷ್ಮ(*Micro*)ವಾಗಿ

ದಾಖಲಿಸುವುದು ಈ ತಾಲೂಕು ಗ್ಯಾಸೆಟಿಯರ್‌ಗಳ ಮೂಲ ಉದ್ದೇಶವಾಗಿರುತ್ತದೆ" ಎಂದು ಹೇಳಿದ್ದಾರೆ. ಮುಂದೆ ೧೯೨೯ರಲ್ಲಿ ಶ್ರೀ ಎಲ್.ಎನ್. ಸ್ವಾಮಿಯವರು ಸಂಪಾದಿಸಿ ಪ್ರಕಟಿಸಿದ ತಾಲೂಕು ಕೈಪಿಡಿಗಳು ಕಿರುಗಾತ್ರದ, ಅಂಕಿ–ಅಂಶ ಪ್ರಧಾನ ಹೊತ್ತಿಗೆಗಳಾದರೂ, ಆ ದಿನಗಳಿಗೆ ಅದೊಂದು ಉತ್ತಮ ಯತ್ನವಾಗಿತ್ತು. ಆದರೆ ಆನಂತರದಲ್ಲಿ ಆ ಪ್ರಕಟಣೆಗಳೂ ನಿಂತು ಹೋಗಿದ್ದವು. ಈ ಹಿನ್ನೆಲೆಯಲ್ಲಿ ತಾಲೂಕು ಕೈಪಿಡಿಗಳನ್ನು ಪುನರುಜ್ಜೀವನಗೊಳಿಸುವ ಉದ್ದೇಶದಿಂದ ಇಲಾಖೆಯು ಪ್ರಾಯೋಗಿಕ ಯೋಜನೆಯಾಗಿ (*Pilot Project*) ಮೈಸೂರು ಜಿಲ್ಲೆಯ ಏಳು ತಾಲೂಕುಗಳ ಗ್ಯಾಸೆಟಿಯರ್ ಸಂಪುಟಗಳನ್ನು ಪ್ರಸ್ತುತ ಪ್ರಕಟಿಸುತ್ತಿದೆ.

ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಂತೆ ಜಿಲ್ಲಾ ಗ್ಯಾಸೆಟಿಯರುಗಳ ಪ್ರಕಟಣೆಯನ್ನೇ ಮುಖ್ಯ ಉದ್ದೇಶವನ್ನಾಗಿರಿಸಿಕೊಂಡು ೧೯೫೮ರಲ್ಲಿ ಆರಂಭಗೊಂಡ ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಇಲಾಖೆಯು ಹಿಂದಿನ ಎಲ್ಲಾ ೨೦ ಜಿಲ್ಲೆಯ ಗ್ಯಾಸೆಟಿಯರುಗಳನ್ನು ಆಂಗ್ಲಭಾಷೆಯಲ್ಲಿ ಪ್ರಕಟಿಸುವುದರ ಜೊತೆಗೆ ನಂತರದಲ್ಲಿ ಒಂಬತ್ತು ಜಿಲ್ಲೆಗಳ ಕನ್ನಡ ಆವೃತ್ತಿಗಳನ್ನು ಹೊರತಂದಿದೆ. ಉಳಿದ ಜಿಲ್ಲೆಗಳಿಗೂ ಕನ್ನಡ ಆವೃತ್ತಿಗಳನ್ನು ಹಂತಹಂತವಾಗಿ ಇಲಾಖೆಯು ತರಲಿದೆ. ಆದರೆ ತಾಲೂಕು ಮಟ್ಟದಲ್ಲಿ ಸಮಗ್ರ ಮಾಹಿತಿಯನ್ನು ಒಳಗೊಂಡ ಉತ್ತಮ ಗ್ರಂಥಗಳು ಈವರೆಗೆ ಲಭ್ಯವಿರಲಿಲ್ಲ. ಅಲ್ಲದೆ, ಖಾಸಗಿ ಒಡೆತನದ ಐ.ಬಿ.ಎಚ್ ಪ್ರಕಾಶನ ೧೯೭೦–೮೦ರ ದಶಕದಲ್ಲಿ ಪ್ರಕಟಿಸಿದ 'ತಾಲೂಕು ದರ್ಶನ' ಸರಮಾಲೆ ಕೂಡ 'ತಾಲೂಕನ್ನು' ಸಂಕ್ಷಿಪ್ತವಾಗಿ ಪರಿಚಯಿಸುವ ಪ್ರಯತ್ನವಾಗಿದ್ದರೂ ಪುಟ ಮಿತಿಯಿಂದಾಗಿ ಸಮಗ್ರತೆಯ ಕೊರತೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ, ಇಲಾಖೆಯು ಈಗಾಗಲೇ ಹೊರತಂದಿರುವ ಜಿಲ್ಲಾ ಗ್ಯಾಸೆಟಿಯರ್‌ಗಳ ಮಾದರಿಯಲ್ಲಿ ತಾಲೂಕು ಗ್ಯಾಸೆಟಿಯರ್‌ಗಳನ್ನೂ ಪ್ರಕಟಿಸಬೇಕೆನ್ನುವ ತನ್ನ ಬಹುದಿನದ ಕನಸನ್ನು ನನಸಾಗಿಸಿಕೊಳ್ಳುವ ನಿಟ್ಟಿನಲ್ಲಿ ಮೈಸೂರು ಜಿಲ್ಲೆಯ ಏಳು ತಾಲೂಕುಗಳಿಗೆ 'ತಾಲೂಕು ಗ್ಯಾಸೆಟಿಯರ್'ಗಳನ್ನು ಪ್ರಕಟಿಸುವ ಮಹತ್ವದ ಯೋಜನೆಯನ್ನು ೨೦೦೫–೦೬ರ ಸಾಲಿನಲ್ಲಿ ಹಮ್ಮಿಕೊಂಡಿತು.

ಅದರಂತೆ ೨೦೦೫-೦೬ರ ಸಾಲಿನಲ್ಲಿ ಪ್ರಾಯೋಗಿಕವಾಗಿ ಮೈಸೂರು ಜಿಲ್ಲೆಯ ಏಳು ತಾಲೂಕುಗಳಿಗೆ ತಾಲೂಕು ಗ್ಯಾಸೆಟಿಯರ್‌ಗಳನ್ನು ಪ್ರಕಟಿಸುವ ಯೋಜನೆಯನ್ನು ಹಮ್ಮಿಕೊಂಡ ಗ್ಯಾಸೆಟಿಯರ್ ಇಲಾಖೆಯು, ಸಂಪಾದಕ ವೃಂದದ ಕೊರತೆಯಿಂದಾಗಿ, ಈ ಸಂಪುಟಗಳ ರಚನಾಕಾರ್ಯವನ್ನು ಹೊರಗುತ್ತಿಗೆ ಆಧಾರದ ಮೇಲೆ ಸ್ಥಳೀಯ ವಿದ್ವಾಂಸರಿಗೆ ನೀಡಲು ನಿರ್ಧರಿಸಿತು. ಅದರಂತೆ ಸ್ಥಳೀಯ ವಿದ್ವಾಂಸರು ರಚಿಸಿ ನೀಡಿದ ತಾಲೂಕು ಗ್ಯಾಸೆಟಿಯರ್ ಸಂಪುಟಗಳನ್ನು ಇಲಾಖೆಯ ಸಂಪಾದಕ ಹಾಗೂ ಅನ್ವೇಷಕ ವರ್ಗದವರು ಪರಿಶೀಲಿಸಿ, ಪರಿಷ್ಕರಿಸಿ ಶುದ್ಧ ಹಸ್ತಪ್ರತಿಯನ್ನೂ ಸಿದ್ಧಪಡಿಸುವಲ್ಲಿ ಸಾಕಷ್ಟು ಶ್ರಮವಹಿಸಬೇಕಾಯಿತು. ಅಲ್ಲದೇ ಅಂಕಿ-ಅಂಶಗಳ ಇಂದೀಕರಣ ಹಾಗೂ ವಿಷಯಗಳ ಪರಾಮರ್ಶೆಯನ್ನು ಕೈಗೊಂಡ ಕಾರಣ ಸಂಪಾದನಾ ಕಾರ್ಯವು ಇದೀಗ ಪೂರ್ಣಗೊಂಡು ಸಂಪುಟಗಳು ಮುದ್ರಣಗೊಂಡಿವೆ. ಈ ಸಂಪುಟಗಳಲ್ಲಿ ೨೦೦೮-೦೯ರವರೆಗಿನ ಅಂಕಿ-ಅಂಶಗಳನ್ನು ಸಂದರ್ಭಾನುಸಾರ ಅಳವಡಿಸಲಾಗಿದ್ದು, ಓದುಗರ ಅನುಕೂಲಕ್ಕಾಗಿ, ತಾಲೂಕು ಹಾಗೂ ಜಿಲ್ಲಾ ಅಂಕಿ-ಅಂಶಗಳ ತುಲನಾತ್ಮಕ ಪಟ್ಟಿಯನ್ನೂ ಅನುಬಂಧದಲ್ಲಿ ನೀಡಲಾಗಿದೆ.

ಮೈಸೂರು ಜಿಲ್ಲೆಯ ಏಳು ತಾಲೂಕುಗಳಲ್ಲಿ ಒಂದಾದ ಪಿರಿಯಾಪಟ್ಟಣ ಜಿಲ್ಲೆಯ ಪಶ್ಚಿಮ ಹಾಗೂ ವಾಯುವ್ಯ ಗಡಿಯಾಗಿದ್ದು, ಅರೆ ಮಲೆನಾಡು ಪ್ರದೇಶದಲ್ಲಿದೆ. ಈ ತಾಲೂಕು ಭೌಗೋಳಿಕವಾಗಿ ಜಿಲ್ಲೆಯಲ್ಲಿ ಐದನೆಯ ಸ್ಥಾನದಲ್ಲಿದ್ದು, ಜನಸಂಖ್ಯಾ ದೃಷ್ಟಿಯಿಂದ ಆರನೆಯ ಸ್ಥಾನ ಪಡೆದಿದ್ದು, ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಸಮೃದ್ಧ ತಾಲೂಕಾಗಿದೆ. ಧಾರ್ಮಿಕ ಮಹತ್ವದ ಬೆಟ್ಟದಪುರವನ್ನು ಹೊಂದಿರುವ ಈ ತಾಲೂಕು ಚಾರಿತ್ರಿಕ ಮಹತ್ವವನ್ನೂ, ಸಾಂಸ್ಕೃತಿಕ ಪ್ರಾಮುಖ್ಯತೆಯನ್ನೂ, ಧಾರ್ಮಿಕ ವೈವಿಧ್ಯವನ್ನೂ, ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯನ್ನೂ ಹೊಂದಿದ್ದು, ಪ್ರವಾಸೋದ್ಯಮ ದೃಷ್ಟಿಯಿಂದ ಬಹು ಹಿಂದಿನಿಂದಲೂ ವಿಶಿಷ್ಟ ಸ್ಥಾನವನ್ನು ಪಡೆದಿದೆ. ೨೦೦೯-೧೪ರ ನೂತನ ಕೈಗಾರಿಕಾ ನೀತಿಯನ್ವಯ, ಕೈಗಾರಿಕ ದೃಷ್ಟಿಯಿಂದ

ಹಿಂದುಳಿದಿರುವ ತಾಲೂಕುಗಳನ್ನೊಳಗೊಂಡ ಕೈಗಾರಿಕಾ ವಲಯ–IIIರ ಗುಂಪಿನಲ್ಲಿದ್ದು, ಕೈಗಾರಿಕಾಭಿವೃದ್ಧಿಗೆ ಹೇರಳ ಅವಕಾಶವಿದೆ.

ಹಿಂದೆ 'ಸಿಂಗಪಟ್ಟಣ' ಎಂದೇ ಖ್ಯಾತಿ ಪಡೆದಿದ್ದ ಪಿರಿಯಾಪಟ್ಟಣ ತಾಲೂಕು ಪ್ರದೇಶವು ಪುನ್ನಾಟ–೬೦೦೦ ನಾಡೆಂದು ಪ್ರಸಿದ್ಧವಾಗಿದ್ದು, ನಂತರದಲ್ಲಿ ಕೊಂಗಾಳ್ವ ನಾಡೆಂದು ಹೆಸರುವಾಸಿಯಾಗಿತ್ತು. ಗಂಗರ ಆಳ್ವಿಕೆಯಲ್ಲಿ ಬೂವನಹಳ್ಳಿ ಕೊಣಸೂರು, ಕಿತ್ತೂರು, ಕುಡುಕೂರು, ಕೂರಗಲ್ಲು, ಹಿರೆಮಳಲಿ, ಹಿಟ್ನಹೆಬ್ಬಾಗಿಲು ಮುಂತಾದವು, ಸಿಡಿಲು ಮಲ್ಲಿಕಾರ್ಜುನ ಆಲಯವಿರುವ ಬೆಟ್ಟದಪುರ, ಚೆಂಗಾಳ್ವರ ಕಾಲಕ್ಕೆ ಸೇರಿದ ಸೂಳೇಕೋಟೆ, ಸಂಗರಶೆಟ್ಟಿಹಳ್ಳಿ, ಬೆಟ್ಟದ ತುಂಗ ಮುಂತಾದವು ತಾಲೂಕಿನ ಮಹತ್ವದ ಚಾರಿತ್ರಿಕ ನೆಲೆಗಳಾಗಿವೆ. ಮೈಸೂರು ಅರಸರು ಹಾಗೂ ಚಂಗಾಲ್ವರ ನಡುವೆ ಜರುಗಿದ ಪಿರಿಯಾಪಟ್ಟಣ ಕಾಳಗದಿಂದಾಗಿ ಖ್ಯಾತಿ ಪಡೆದಿರುವ ಪಿರಿಯಾಪಟ್ಟಣ; ಟಿಬೇಟಿಯನ್ ಕ್ಯಾಂಪ್ ಬೈಲಕುಪ್ಪೆಯಲ್ಲಿರುವ ಬೌದ್ಧಮಂದಿರವನ್ನೂ ಹೊಂದಿರುವ ಈ ತಾಲೂಕಿನ ವಿಭಿನ್ನ ಮುಖಗಳನ್ನು ೧೨ ಅಧ್ಯಾಯಗಳ ಮೂಲಕ ಆಕರ್ಷಕ ಛಾಯಾಚಿತ್ರಗಳೊಂದಿಗೆ ನಿರೂಪಿಸಲು ಸದರಿ ತಾಲೂಕು ಗ್ಯಾಸೆಟಿಯರ್ ಸಂಪುಟದಲ್ಲಿ ಪ್ರಯತ್ನಿಸಲಾಗಿದೆ.

ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಶ್ರೀಮತಿ ಉಷಾ ಗಣೇಶ್ ಭಾ.ಆ.ಸೇ. (ನಿವೃತ್ತ) ಇವರು ಮೂಲ ಕಾರಣರಾಗಿದ್ದನ್ನು ಇಲ್ಲಿ ದಾಖಲಿಚ್ಛಿಸುತ್ತೇನೆ. ಈಗಿನ ಕಾರ್ಯದರ್ಶಿಗಳಾಗಿರುವ ಶ್ರೀ ಬಿ.ಆರ್. ಜಯರಾಮರಾಜೇ ಅರಸ್ ಭಾ.ಆ.ಸೇ., ಇಲಾಖೆಯ ಮುಖ್ಯ ಸಂಪಾದಕರಾಗಿದ್ದ ಶ್ರೀ ಎಸ್.ಎ. ಜಿಲಾನಿ, ಕ.ಆ.ಸೇ., ಹಾಗೂ ಪ್ರಭಾರ ಮುಖ್ಯಸಂಪಾದಕರಾಗಿದ್ದ ಶ್ರೀಮತಿ ನೀಲಾ ಮಂಜುನಾಥ, ಕ.ಆ.ಸೇ., ಇವರ ಸಹಕಾರ ಹಾಗೂ ಸೇವೆಯನ್ನು ಸ್ಮರಿಸುತ್ತೇನೆ. ತಾಲೂಕು ಗ್ಯಾಸೆಟಿಯರ್ ಸಂಪುಟಗಳನ್ನು ಪರಿಶೀಲಿಸುವಲ್ಲಿ ಸಹಕರಿಸಿರುವ ತಾಲೂಕು ಗ್ಯಾಸೆಟಿಯರ್ ಸಲಹಾ ಸಮಿತಿಯ ಎಲ್ಲಾ

ಸದಸ್ಯರಿಗೂ (ಸದಸ್ಯರ ಪಟ್ಟಿಯನ್ನು ಪ್ರತ್ಯೇಕ ನೀಡಲಾಗಿದೆ) ಇಲಾಖೆಯು ಧನ್ಯವಾದವನ್ನು ಸಲ್ಲಿಸುತ್ತದೆ. ಸ್ಥಳೀಯ ವಿದ್ವಾಂಸರಿಂದ ರಚಿಸಲ್ಪಟ್ಟ ಈ ತಾಲೂಕು ಗ್ಯಾಸೆಟಿಯರ್‌ಗಳ ಸಂಪಾದನಾ ಕಾರ್ಯದಲ್ಲಿ ಕೈಜೋಡಿಸಿ ಸಂಪುಟಗಳ ಓರೆ–ಕೋರೆಗಳನ್ನು ತಿದ್ದಿ–ತೀಡಿ ಈ ರೂಪಕ್ಕೆ ತರುವಲ್ಲಿ ಇಲಾಖೆಯ ಸಂಪಾದಕ ವರ್ಗ ಹಾಗೂ ಅನ್ವೇಷಕ ವರ್ಗ ವಿಶೇಷವಾಗಿ ಪರಿಶ್ರಮಿಸಿದ್ದಾರೆ. ಅದಕ್ಕಾಗಿ ಅವರಿಗೂ, ಸಿಬ್ಬಂದಿ ವರ್ಗಕ್ಕೂ ಕೃತಜ್ಞತೆ ಸಲ್ಲಿಸುತ್ತೇನೆ.

'ಪಿರಿಯಾಪಟ್ಟಣ ತಾಲೂಕು ಗ್ಯಾಸೆಟಿಯರ್' ಸಂಪುಟವನ್ನು ಕರ್ನಾಟಕ ಗ್ಯಾಸೆಟಿಯರ್ ಇಲಾಖೆಗಾಗಿ ರಚಿಸಿ, ಛಾಯಾಚಿತ್ರಗಳನ್ನೂ ಒದಗಿಸಿಕೊಟ್ಟಿರುವ ಡಾ. ಪಿ.ಕೆ. ರಾಜಶೇಖರ್, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಇವರಿಗೆ ಇಲಾಖೆಯು ಅಭಾರಿಯಾಗಿದೆ. ಸದರಿ ಸಂಪುಟಕ್ಕೆ ತಾಲೂಕು ನಕಾಶೆಯನ್ನು ಸಿದ್ಧಪಡಿಸಿಕೊಟ್ಟಿರುವ ಕಂದಾಯ ಭೂ ಸರ್ವೇಕ್ಷಣ ಇಲಾಖೆಯ ಅಧಿಕಾರಿ ವರ್ಗಕ್ಕೆ ಹಾಗೂ ಈ ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಪರಿಶ್ರೀ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಆರ್. ಶ್ರೀನಾಥ್ ಹಾಗೂ ಸಿಬ್ಬಂದಿವರ್ಗಕ್ಕೆ ಇಲಾಖೆಯು ಕೃತಜ್ಞತೆ ಸಲ್ಲಿಸುತ್ತದೆ. ಇಲಾಖೆಯ ಈ ವಿನೂತನ ಯೋಜನೆಯನ್ನು ಎಂದಿನಂತೆ ವಿದ್ವಾಂಸರಾದಿಯಾಗಿ ಜನಸಾಮಾನ್ಯರೂ ಸ್ವಾಗತಿಸುವರೆಂದು ಆಶಿಸಲಾಗಿದೆ.

೨೭–೧೦–೨೦೧೦ **ಎಸ್. ಅನೀಸ್ ಸಿರಾಜ್,** ಕ.ಆ.ಸೇ.

ಬೆಂಗಳೂರು ಮುಖ್ಯ ಸಂಪಾದಕರು

# ವಿಷಯಾನುಕ್ರಮಣಿಕೆ

**ಅಧ್ಯಾಯ ೧ ಪ್ರಾಸ್ತಾವಿಕ** ೧–೯

ಹೆಸರಿನ ಮೂಲ(೨) ಮೇರೆಗಳು(೩) ವಿಸ್ತೀರ್ಣ ಮತ್ತು ಜನಸಂಖ್ಯಾ ವಿವಿರ(೩) ಭೂಸ್ವರೂಪ(೪) ನದಿಗಳು(೫) ಖನಿಜಸಂಪತ್ತು(೬) ಸಸ್ಯ ಸಂಪತ್ತು(೭) ಸಾಮಾಜಿಕ ಅರಣ್ಯ(೭) ವಾಯುಗುಣ(೮) ಪರಿಸರ ಮಾಲಿನ್ಯ(೯)

**ಅಧ್ಯಾಯ ೨ ಇತಿಹಾಸ** ೧೦–೩೧

ಪೌರಾಣಿಕ ಹಿನ್ನೆಲೆ(೧೦) ಪ್ರಾಗೈತಿಹಾಸ(೧೨) ಇತಿಹಾಸ ಕಾಲ(೧೪) ಬನವಾಸಿ ಕದಂಬರು(೧೫) ಗಂಗರು(೧೫) ಚಂಗಾಳ್ವರ ಇತಿಹಾಸ(೧೬) ಸ್ವಾತಂತ್ರ್ಯ ಹೋರಾಟ(೨೩) ರೈತ ಚಳುವಳಿ(೨೭) ಚುನಾವಣೆಗಳು(೨೮) ಲೋಕಸಭಾಕ್ಷೇತ್ರದ ಚುನಾವಣಾ ಫಲಿತಾಂಶ(೨೯) ವಿಧಾನಸಭಾ ಕ್ಷೇತ್ರಗಳ ಚುನಾವಣಾ ಫಲಿತಾಂಶ(೩೧)

**ಅಧ್ಯಾಯ ೩ ಜನತೆ** ೩೨–೭೬

ಜನಸಂಖ್ಯೆ(೩೨) ಧರ್ಮಗಳು(೩೫) ಹಿಂದೂಧರ್ಮ(೩೬) ಬೌದ್ಧಧರ್ಮ(೪೧) ಜೈನಧರ್ಮ(೪೧) ಇಸ್ಲಾಂ(೪೨) ಕ್ರೈಸ್ತಧರ್ಮ(೪೨) ಮಠಗಳು(೪೩) ಪ್ರಮುಖ ಜಾತಿ ಹಾಗೂ ಬುಡಕಟ್ಟು ಸಮುದಾಯಗಳು(೪೫) ಅಗಸ(೪೭) ಅರಸು(೪೮) ಈಡಿಗ(೪೮) ಉಪ್ಪಾರ(೪೯) ಒಕ್ಕಲಿಗ(೪೯) ಕುರುಬ(೫೦) ಕುಂಬಾರ(೫೦) ಕ್ಷೌರಿಕ(೫೧) ಗಾಣಿಗ(೫೧) ತಮ್ಮಡಿ(೫೨) ದೇವಾಂಗ(೫೨) ಬ್ರಾಹ್ಮಣ(೫೨) ಮರಾಠರು(೫೩) ಮಾದಿಗ(೫೪) ಮೇದ(೫೪) ಮೊದಲಿಯಾರ್(೫೪) ಯಾದವ(೫೫) ಲಿಂಗಾಯತ(೫೫) ವಡ್ಡ(೫೬) ವಿಶ್ವಕರ್ಮ(೫೬) ವೈಶ್ಯ(೫೭) ಹೊಲೆಯ(೫೭) ಬುಡಕಟ್ಟು ಜನ ಮತ್ತು ಅವರ ಅಭಿವೃದ್ಧಿ(೫೭) ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳು(೫೮) ಜೀವನಾವರ್ತ ಸಂಪ್ರದಾಯಗಳು(೬೦) ಆಹಾರ ಪದ್ಧತಿ(೬೪) ಸಾಮಾಜಿಕ ಜೀವನ(೬೭) ಗೃಹಜೀವನ(೬೮) ಗೃಹೋಪಯೋಗಿ ವಸ್ತುಗಳು(೬೯) ಉಡುಪು(೭೦) ಆಭರಣಗಳು(೭೧) ಹಬ್ಬ–ಹರಿದಿನ, ಜಾತ್ರೆ, ಉತ್ಸವಗಳು(೭೧) ತಾಲೂಕಿನ ಮಹನೀಯರು(೭೫)

**ಅಧ್ಯಾಯ ೪ ಕೃಷಿ ಮತ್ತು ನೀರಾವರಿ ೭೭–೮೯**

ಪ್ರಾಚೀನ ಕೃಷಿ ಪದ್ಧತಿಗಳು(೭೭) ಕೃಷಿಕಾರ್ಮಿಕರು(೭೮) ಭೂ ಬಳಕೆ(೭೮) ಭೂ ಹಿಡುವಳಿ() ಭೂ ಹಿಡುವಳಿಗಳು(೭೯) ಬೆಳೆ ಪದ್ಧತಿ(೭೯) ರಾಗಿ(೭೯) ಬತ್ತ(೮೦) ಮುಸುಕಿನ ಜೋಳ(೮೧) ಹೊಗೆಸೊಪ್ಪು(೮೧) ಗೊಬ್ಬರ ಬಳಕೆ(೮೨) ತೋಟಗಾರಿಕೆ(೮೩) ತೆಂಗು(೮೩) ನೀರಾವರಿ(೮೪) ಪ್ರಮುಖ ನೀರಾವರಿ ಯೋಜನೆಗಳು (೮೬) ಪಶುಸಂಗೋಪನೆ(೮೭) ಮೀನುಗಾರಿಕೆ(೮೯)

**ಅಧ್ಯಾಯ ೫ ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು ೯೦–೧೦೦**

ಪ್ರಾಚೀನ ಕೈಗಾರಿಕೆಗಳು(೯೨) ವಿದ್ಯುತ್(೯೨) ಖನಿಜ ಸಂಪತ್ತು(೯೩) ಆಧುನಿಕ ಕೈಗಾರಿಕೆಗಳು(೯೩) ಕರಕುಶಲ ಕೈಗಾರಿಕೆ(೯೬) ರೇಷ್ಮೆ ಉದ್ಯಮ(೯೭) ಹೈನು ಉದ್ಯಮ(೯೭) ಉದ್ಯೋಗ(೯೭) ಬಡತನ ನಿರ್ಮೂಲನೆ(೯೮) ತಾಲೂಕಿನಲ್ಲಿ ಕೈಗಾರಿಕಾ ಅಭಿವೃದ್ಧಿಯ ಸಾಧ್ಯತೆಗಳು(೯೯)

**ಅಧ್ಯಾಯ ೬ ಬ್ಯಾಂಕಿಂಗ್, ಸಹಕಾರ ಮತ್ತು ವಾಣಿಜ್ಯ ೧೦೧–೧೦೯**

ಪ್ರಾಚೀನ ಕಾಲದ ಹಣಕಾಸು ವ್ಯವಹಾರ ಪದ್ಧತಿ(೧೦೧) ರಾಷ್ಟ್ರೀಕೃತ ಬ್ಯಾಂಕಿಂಗ್ ಚಟುವಟಿಕೆಗಳು ಹಾಗೂ ಸಾಧನೆ(೧೦೧) ಸರ್ಕಾರಿ ವಿಮೆ(೧೦೨) ನಾಣ್ಯ ಪದ್ಧತಿ(೧೦೩) ಸಹಕಾರ ಸಂಘಗಳು(೧೦೪) ಹಾಲು ಉತ್ಪಾದಕರ ಸಹಕಾರ ಸಂಘಗಳು(೧೦೬) ಸ್ತ್ರೀಶಕ್ತಿ ಸಂಘಗಳು(೧೦೬) ಸಂತೆಗಳು(೧೦೭) ನಿಯಂತ್ರಿತ ಮಾರುಕಟ್ಟೆ(೧೦೭) ಸಾರ್ವಜನಿಕ ಪಡಿತರ ವಿತರಣೆ(೧೦೮) ಉಗ್ರಾಣ ವ್ಯವಸ್ಥೆ(೧೦೮) ತೂಕ ಮತ್ತು ಅಳತೆ(೧೦೮) ಇತರ ಸಮಾಜ ಸೇವಾ ಸೌಲಭ್ಯಗಳು (೧೦೮) ಸಂಘ ಸಂಸ್ಥೆಗಳು(೧೦೯)

**ಅಧ್ಯಾಯ ೭ ಸಾರಿಗೆ ಮತ್ತು ಸಂಪರ್ಕ ೧೧೦–೧೧೬**

ಸೇತುವೆಗಳು(೧೧೧) ಜಲಸಾರಿಗೆ(೧೧೨) ಸಾರ್ವಜನಿಕ ಸಾರಿಗೆ(೧೧೨) ರೈಲು ಯೋಜನೆ(೧೧೩) ಅಂಚೆ–ತಂತಿ ಸೇವೆ(೧೧೩) ದೂರವಾಣಿ (೧೧೪) ಆಕಾಶವಾಣಿ(೧೧೫) ದೂರದರ್ಶನ(೧೧೫)

**ಅಧ್ಯಾಯ ೮ ಸಾರ್ವತ್ರಿಕ ಆಡಳಿತ ೧೧೭–೧೩೮**

ಪ್ರಾಚೀನ ಕಾಲದ ಆಡಳಿತ ವ್ಯವಸ್ಥೆ(೧೧೭) ತಹಶೀಲ್ದಾರ್(೧೧೭) ಕ್ಷೇತ್ರಾಭಿವೃದ್ಧಿ ಅಧಿಕಾರಿ ಕಚೇರಿ(೧೧೮) ಕಂದಾಯ ನಿರೀಕ್ಷಕರು(೧೧೮) ನಾಡ ಕಚೇರಿ(೧೧೯) ಗ್ರಾಮ ಲೆಕ್ಕಿಗಳು(೧೧೯) ಗ್ರಾಮ ಸಹಾಯಕರು(೧೧೯) ಸಾಮಾನ್ಯ ಆಡಳಿತ ಮತ್ತು ಕಂದಾಯ ಆಡಳಿತ(೧೧೯) ವಾರ್ಷಿಕ ಲೆಕ್ಕಾಚಾರ(ದಿಲ್ವಾರು)(೧೨೩) ಜಮಾಬಂದಿ(೧೨೩) ಭೂ ಕಂದಾಯ ವಸೂಲಿ(೧೨೪) ಕಂದಾಯ ಮಾಫಿ(೧೨೪) ಇನಾಂ ಭೂಮಿ(೧೨೫) ಭೂ ಸುಧಾರಣೆ(೧೨೫) ಇತರ ತೆರಿಗೆಗಳು(೧೨೭) ಭೂ ಕಂದಾಯ ಸರ್ವೇಕ್ಷಣ(೧೨೭) ಸ್ಥಳೀಯ ಸ್ವಯಂ ಆಡಳಿತ(೧೨೮) ತಾಲೂಕು ಪಂಚಾಯಿತಿ(೧೨೮) ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ(೧೨೮) ಪಟ್ಟಣ ಪಂಚಾಯ್ತಿ(೧೨೯) ಗ್ರಾಮಪಂಚಾಯ್ತಿ(೧೩೦) ಪೊಲೀಸ್ ಆಡಳಿತ ವ್ಯವಸ್ಥೆ(೧೩೦) ಗೃಹರಕ್ಷಕದಳ(೧೩೨) ನ್ಯಾಯಾಡಳಿತ(೧೩೨) ತಾಲೂಕು ಕಾನೂನು ನೆರವು ಸಮಿತಿ(೧೩೪) ಕಾರಾಗೃಹ(೧೩೪) ಅಗ್ನಿಶಾಮಕ ಸೇವೆಗಳು(೧೩೫) ಕೃಷಿ ಇಲಾಖೆ(೧೩೫) ಶಿಕ್ಷಣ ಇಲಾಖೆ(೧೩೫) ತೋಟಗಾರಿಕೆ ಇಲಾಖೆ(೧೩೬) ಪಶುಸಂಗೋಪನೆ ಮತ್ತು ವೈದ್ಯಕೀಯ ಸೇವೆ(೧೩೬) ಅರಣ್ಯ ಇಲಾಖೆ(೧೩೬) ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯ(೧೩೬) ನೀರಾವರಿ ಇಲಾಖೆ(೧೩೬) ಲೋಕೋಪಯೋಗಿ ಇಲಾಖೆ(೧೩೬) ಸಣ್ಣ ನೀರಾವರಿ ಇಲಾಖೆ(೧೩೭) ಸಮಾಜ ಕಲ್ಯಾಣ ಇಲಾಖೆ(೧೩೭) ಉಪ ಖಜಾನೆ(೧೩೭) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ(೧೩೭) ಅಬಕಾರಿ ಇಲಾಖೆ(೧೩೭) ಕಾರ್ಮಿಕ ಇಲಾಖೆ(೧೩೭) ಮೀನುಗಾರಿಕೆ ಇಲಾಖೆ(೧೩೮) ಗ್ರಂಥಾಲಯ ಇಲಾಖೆ(೧೩೮) ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(೧೩೮)

**ಅಧ್ಯಾಯ ೯**
**ಶಿಕ್ಷಣ ವ್ಯವಸ್ಥೆ ಮತ್ತು ಗ್ರಾಮೀಣ ಕ್ರೀಡೆಗಳು ೧೩೯–೧೪೬**

ಶಿಕ್ಷಣ ಪದ್ಧತಿಯ ಹಿನ್ನೆಲೆ(೧೩೯) ಸಾಕ್ಷರತೆ(೧೩೯) ಸರ್ಕಾರಿ ಮತ್ತು ಖಾಸಗಿ ಶಾಲೆಗಳು(೧೪೦) ಪ್ರಮುಖ ಶಿಕ್ಷಣದ ಹಂತಗಳು(೧೪೦) ಅಂಗನವಾಡಿ(೧೪೧) ಆಡಳಿತ ಸುಧಾರಣೆ(೧೪೧) ಪ್ರೌಢಶಾಲೆ(೧೪೨) ಟ್ರೈಮಿಸ್ಟರ್ ಪದ್ಧತಿ(೧೪೨) ಅಕ್ಷರ ದಾಸೋಹ(೧೪೩) ಪದವಿಪೂರ್ವ ಕಾಲೇಜು(೧೪೩) ಪದವಿ ಶಿಕ್ಷಣ(೧೪೩) ವಯಸ್ಕರ ಶಿಕ್ಷಣ(೧೪೩) ವಿದ್ಯಾರ್ಥಿ ನಿಲಯಗಳು(೧೪೪) ವಸತಿಶಾಲೆ(೧೪೪) ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ(೧೪೪) ಕ್ರೀಡೆಗಳು(೧೪೫)

**ಅಧ್ಯಾಯ ೧೦ ಸಾಹಿತ್ಯ ಮತ್ತು ಸಂಸ್ಕೃತಿ ೧೪೮–೧೬೩**

ಶಾಸನಗಳು(೧೪೮) ಸಾಹಿತ್ಯ(೧೪೮) ಜಾನಪದ(೧೫೨) ಸಂಗೀತ–ನೃತ್ಯ(೧೫೬) ಗಮಕ(೧೫೭) ವಾಸ್ತುಶಿಲ್ಪ(೧೫೮) ಶಿಲ್ಪಕಲೆ(೧೫೯) ಕೀರ್ತನ ಕಲಾವಿದರು(೧೫೯) ಪತ್ರಿಕೋದ್ಯಮ(೧೬೦) ಚಲನಚಿತ್ರ ಮತ್ತು ಕಿರುತೆರೆ(೧೬೧)

**ಅಧ್ಯಾಯ ೧೧**
**ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು ೧೬೪–೧೭೩**

ಜನನ–ಮರಣ(೧೬೪) ಸರ್ಕಾರಿ ಆಸ್ಪತ್ರೆಗಳು(೧೬೪) ಪ್ಲೇಗು(೧೬೬) ಮಲೇರಿಯಾ(೧೬೬) ಕಾಲರ(೧೬೬) ಕುಷ್ಠರೋಗ(೧೬೬) ಕ್ಷಯರೋಗ(೧೬೭) ಸಿಡುಬು(೧೬೭) ಡೆಂಗೀಜ್ವರ(೧೬೭) ಮೆದುಳುಜ್ವರ(೧೬೮) ಏಡ್ಸ್(೧೬೮) ಚಿಕೂನ್‌ಗುನ್ಯ(೧೬೮) ಕುಟುಂಬಕಲ್ಯಾಣ ಕಾರ್ಯಕ್ರಮ(೧೬೮) ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ(೧೬೯) ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಯೋಜನೆ(೧೬೯) ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಯೋಜನೆ(೧೬೯) ರಾಷ್ಟ್ರೀಯ ಕಾಲರಾ ನಿಯಂತ್ರಣ ಕಾರ್ಯಕ್ರಮ(೧೭೦) ರಾಷ್ಟ್ರೀಯ ಅಂಧತ್ವ ನಿವಾರಣಾ ಯೋಜನೆ(೧೭೦) ಶಾಲಾ ಮಕ್ಕಳ ಆರೋಗ್ಯ ಕಾರ್ಯಕ್ರಮ(೧೭೧) ರೇಬೀಸ್ ವಿರುದ್ಧ ಕಾರ್ಯಾಚರಣೆ(೧೭೧) ಅಂಗನವಾಡಿಗಳು(೧೭೨) ಆರೋಗ್ಯ ಶಿಕ್ಷಣ ಯೋಜನೆ(೧೭೨)

**ಅಧ್ಯಾಯ ೧೨ ಪ್ರೇಕ್ಷಣೀಯ ಸ್ಥಳಗಳು ೧೭೪–೧೮೬**

**ತಾಲೂಕಿನ ಕಂದಾಯ ಗ್ರಾಮ, ಉಪಗ್ರಾಮ ಹಾಗೂ ಪಟ್ಟಣಗಳು ೧೮೭–೧೯೪**

**ಆಯ್ದ ಆಕರ ಗ್ರಂಥಗಳು ೧೯೫**

**೨೦೦೧ರ ಜನಗಣತಿಯಂತೆ ಪಿರಿಯಾಪಟ್ಟಣ ತಾಲೂಕು/ಜಿಲ್ಲೆ/ ರಾಜ್ಯದ ಅಂಕಿಅಂಶಗಳ ನೋಟ ೧೯೬–೧೯೭**

**ಪಿರಿಯಾಪಟ್ಟಣ ತಾಲೂಕಿನ ಅಂಕಿಅಂಶಗಳು ೧೯೮–೨೨೮**

# ಮೈಸೂರು ಜಿಲ್ಲಾ ತಾಲೂಕು ಗ್ಯಾಸೆಟಿಯರ್ ಸಲಹಾ ಸಮಿತಿ

| | |
|---|---|
| ಸರ್ಕಾರದ ಕಾರ್ಯದರ್ಶಿಗಳು<br>ಕನ್ನಡ ಮತ್ತು ಸಂಸ್ಕೃತಿ<br>ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ | ಅಧ್ಯಕ್ಷರು |
| ಡಾ. ಡಿ.ಎಸ್. ಜಯಪ್ಪಗೌಡ<br>ಸಂಶೋಧಕರು ಹಾಗೂ ಪ್ರಾಧ್ಯಾಪಕರು<br>ನಂ. ೫೭, 'ಚಂದನ', ೧ನೇ ಅಡ್ಡರಸ್ತೆ<br>೪ನೇ ಹಂತ, ತೊಣಚಿಕೊಪ್ಪಲು ಬಡಾವಣೆ<br>ಮೈಸೂರು | ಸದಸ್ಯರು |
| ಡಾ. ಎ. ಕೃಷ್ಣಮೂರ್ತಿ ಹನೂರು<br>ಕನ್ನಡ ಪ್ರಾಧ್ಯಾಪಕರು<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ<br>ಮೈಸೂರು–೫೭೦೦೦೬ | ಸದಸ್ಯರು |
| ಶ್ರೀ ಟಿ.ಎಸ್. ರಾಜಪ್ಪ<br>ನಿವೃತ್ತ ಸಂಶೋಧನಾ ಸಹಾಯಕ<br>ಜಾನಪದ ವಿಭಾಗ<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮೈಸೂರು ವಿಶ್ವವಿದ್ಯಾಲಯ<br>ಮಾನಸಗಂಗೋತ್ರಿ, ಮೈಸೂರು | ಸದಸ್ಯರು |
| ಮುಖ್ಯ ಸಂಪಾದಕರು<br>ಕರ್ನಾಟಕ ಗ್ಯಾಸೆಟಿಯರ್<br>ಬೆಂಗಳೂರು | ಸದಸ್ಯ<br>ಕಾರ್ಯದರ್ಶಿ |

# ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಸಿಬ್ಬಂದಿ ವರ್ಗ

| **ಹೆಸರು** | **ಹುದ್ದೆ** |
|---|---|
| ಶ್ರೀಮತಿ / ಶ್ರೀ | |
| ಎಸ್.ಎ. ಜಿಲಾನಿ, ಕ.ಆ.ಸೇ. (೩೧.೬.೨೦೧೦ ರವರೆಗೆ) | ಮುಖ್ಯ ಸಂಪಾದಕರು |
| ನೀಲಾ ಮಂಜುನಾಥ್, ಕ.ಆ.ಸೇ. (೨೬.೮.೨೦೧೦ರವರೆಗೆ) | ಮುಖ್ಯ ಸಂಪಾದಕರು (ಪ್ರಭಾರ) |
| ಎಸ್. ಅನೀಸ್ ಸಿರಾಜ್, ಕ.ಆ.ಸೇ. (೨೬.೮.೨೦೧೦ರಿಂದ) | ಮುಖ್ಯ ಸಂಪಾದಕರು |
| ಎಸ್.ಎ. ಜಗನ್ನಾಥ್ | ಹಿರಿಯ ಸಂಪಾದಕರು (ಪ್ರಭಾರ) |
| ಟಿ.ಜಿ. ನರಸಿಂಹ ಮೂರ್ತಿ (೨೩.೭.೨೦೦೯ ರವರೆಗೆ) | ಹಿರಿಯ ಸಂಪಾದಕರು (ಪ್ರಭಾರ) |
| ಎಸ್.ಎನ್. ರಾಜು | ಸಂಪಾದಕರು |
| ಎಸ್. ರಾಜೇಂದ್ರಪ್ಪ | ಸಂಪಾದಕರು |
| ಎಸ್.ವೈ. ಬೆಟ್ಟೇಗೌಡ | ಸಂಪಾದಕರು |
| ಡಾ॥ ಟಿ. ಗೋವಿಂದರಾಜು (೧೭.೧೧.೨೦೦೭ರವರೆಗೆ) | ಸಂಪಾದಕರು |
| ಹೆಚ್. ನಾಗರತ್ನ (೯.೪.೨೦೧೦ ರಿಂದ) | ಸಂಪಾದಕರು |
| ಪಿ.ಆರ್. ಶ್ರೀನಿವಾಸ್ (೮.೯.೨೦೦೮ ರಿಂದ) | ಅನ್ವೇಷಕರು |
| ಯು. ಸುಮನ (೨೨.೧೦.೨೦೦೮ ರಿಂದ) | ಅನ್ವೇಷಕರು |
| ಮಹೇಶ್ ಮುತ್ತಲಗಿರಿ (೨೨.೧.೨೦೦೮ ರಿಂದ) | ಅನ್ವೇಷಕರು |
| ರಮಾ ಕುಮಾರಿ (೧೬.೦೪.೨೦೧೦ ರಿಂದ) | ಅನ್ವೇಷಕರು |
| ಗಾಯತ್ರಿ (೧೯.೫.೨೦೧೦ ರಿಂದ) | ಅನ್ವೇಷಕರು |
| ಬಿ. ಜಾನಕಿ (೧೦.೯.೨೦೦೭ ರಿಂದ) | ಅಧೀಕ್ಷಕರು |
| ಎನ್.ಎಸ್. ಶಂಕರರಾವ್ (೩೦.೦೭.೨೦೧೦ರವರೆಗೆ) | ಪ್ರಥಮದರ್ಜೆ ಸಹಾಯಕರು |
| ಪಿ. ಸುನೀತಾ (೦೮.೦೪.೨೦೧೦ ರವರೆಗೆ) | ಶೀಘ್ರಲಿಪಿಗಾರರು |
| ಪುಷ್ಪ (೧.೬.೨೦೧೦ ರಿಂದ) | ಪ್ರಥಮದರ್ಜೆ ಸಹಾಯಕರು |
| ಕೆ.ಎಸ್. ಸುಬ್ಬಲಕ್ಷ್ಮಿ | ದ್ವಿತೀಯದರ್ಜೆ ಸಹಾಯಕರು |
| ಸಿ. ನಾಗಲಕ್ಷ್ಮಿ | ಬೆರಳಚ್ಚುಗಾರ್ತಿ |
| ಎಂ.ಹೆಚ್. ಶಿವನಂದಿನಿ (೦೮.೦೪.೨೦೧೦ ರವರೆಗೆ) | ಬೆರಳಚ್ಚುಗಾರ್ತಿ |
| ಟಿ.ಬಿ. ಕುಶಾಲಪ್ಪ | ವಾಹನ ಚಾಲಕರು |
| ಹೆಚ್. ಚಂದ್ರ | 'ಡಿ' ದರ್ಜೆ ನೌಕರರು |
| ಹೆಚ್.ಎನ್. ರಾಘವೇಂದ್ರ | 'ಡಿ' ದರ್ಜೆ ನೌಕರರು |
| ಸಿ. ಸುಗುಣಮ್ಮ | 'ಡಿ' ದರ್ಜೆ ನೌಕರರು |
| ಎಮ್.ಎನ್. ಪದ್ಮ | 'ಡಿ' ದರ್ಜೆ ನೌಕರರು |